Scrtd
14|9|2021
[handwritten Kannada annotation]

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 286

ಸದಸ್ಯರಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿರುವವರು)

ಉತ್ತರಿಸುವ ಸಚಿವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

ಉತ್ತರಿಸುವ ದಿನಾಂಕ : 14-09-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕೇಂದ್ರ ಸರ್ಕಾರದ "ರಾಷ್ಟ್ರೀಯ ಪೋಷಣ್ ಅಭಿಯಾನ"ದಡಿ 2021ನೇ ಇಸವಿಯಲ್ಲಿ ರಾಜ್ಯದಲ್ಲಿ ಮಕ್ಕಳಿಗೆ ರಕ್ತಹೀನತೆ ಮತ್ತು ಕುಂಠಿತ ಬೆಳವಣಿಗೆಯನ್ನು ತಡೆಯಲು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಗುರಿ ಸಾಧಿಸಲಾಗಿದೆಯೇ;	ಕೇಂದ್ರ ಸರ್ಕಾರವು "ರಾಷ್ಟ್ರೀಯ ಪೋಷಣ್ ಅಭಿಯಾನ" ಕಾರ್ಯಕ್ರಮವನ್ನು, 6 ತಿಂಗಳಿನಿಂದ 6 ವರ್ಷದವರೆಗಿನ ಮಕ್ಕಳು, ಗರ್ಭಿಣಿಯುರು ಮತ್ತು ಹಾಲುಣಿಸುವ ತಾಯಂದಿರ ಪೌಷ್ಠಿಕತೆಯ ಸ್ಥಿತಿಯನ್ನು ನಿರ್ದಿಷ್ಟ ಅವಧಿಗೆ ಅನುಗುಣವಾಗಿ ಸುಧಾರಿಸುವ ಸಲುವಾಗಿ ಪ್ರಾರಂಬಿಸಲಾಗಿರುತ್ತದೆ. ರಾಜ್ಯ ಸರ್ಕಾರವು ಈ ಯೋಜನೆಯನ್ನು ಹಂತ ಹಂತವಾಗಿ ಜಾರಿಗೊಳಿಸಲಾಗುತ್ತಿದ್ದು, ನಿಗಧಿತ ಗುರಿ ಸಾಧಿಸಲು ಕ್ರಮವಹಿಸಲಾಗುತ್ತಿದೆ. ಎನ್.ಹೆಚ್.ಎಫ್.ಎಸ್-4 ಮತ್ತು ಎನ್.ಹೆಚ್.ಎಫ್.ಎಸ್-5 ರ ಹೋಲಿಕೆ ಈ ಕೆಳಕಂಡಂತಿವೆ: ಕಡಿಮೆ ತೂಕ ತೀವ್ರ ಕಡಿಮೆ ತೂಕ (see table below) ಪ್ರಸ್ತುತ 4528315 ಮಕ್ಕಳ ಮಾಹಿತಿಯನ್ನು ಪೋಷಣ್ ಟ್ರ್ಯಾಕರ್ ಅಪ್‌ನಲ್ಲಿ ಅಳವಡಿಸಲಾಗಿದೆ.
ಆ)	ಹಾಗಿದ್ದಲ್ಲಿ, ಇದುವರೆಗೆ ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯ ಸರ್ಕಾರವು ಈ ಯೋಜನೆಯನ್ನು ಹಂತ ಹಂತವಾಗಿ ಜಾರಿಗೊಳಿಸಲಾಗುತ್ತಿದ್ದು, ನಿಗಧಿತ ಗುರಿ ಸಾಧಿಸಲು ಈ ಕೆಳಕಂಡಂತೆ ಸಮುದಾಯ ಆಧಾರಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ: • ಸೀಮಂತ ಕಾರ್ಯಕ್ರಮ: ಗರ್ಭಿಣಿಯರು ಸೇವಿಸಬೇಕಾದ ಸ್ಥಳೀಯವಾಗಿ ಲಭ್ಯವಿರುವ ಆಹಾರ ಪದಾರ್ಥಗಳಿಂದ ಪೌಷ್ಠಿಕ ಆಹಾರ ತಯಾರಿಕೆ ಪ್ರಾತ್ಯಕ್ಷತೆ, ಎದೆಹಾಲಿನ ಮಹತ್ವದ ಬಗ್ಗೆ ಮಾಹಿತಿ ನೀಡುವುದು ಮತ್ತು ಆಸ್ಪತ್ರೆಯಲ್ಲಿ ಹೆರಿಗೆ ಹಾಗೂ ಇಲಾಖೆಯಿಂದ ಸೌಲಭ್ಯಗಳ ಮಾಹಿತಿ. • ಅನ್ನಪ್ರಶಾನ : 6 ತಿಂಗಳ ನಂತರದ ಮಕ್ಕಳಿಗೆ ಎದೆಹಾಲಿನ ಜೊತೆಗೆ ನೀಡಬಹುದಾದ ಪೂರಕ ಆಹಾರದ ಬಗ್ಗೆ ಪ್ರಾತ್ಯಕ್ಷತೆ ಹಾಗೂ ಮಾಹಿತಿ ಮತ್ತು ಮಕ್ಕಳಿಗೆ ನೀಡಬೇಕಾಗಿರುವ ಚುಚ್ಚುಮದ್ದುಗಳ ವಿವರ. • ಸುಪೋಷಣ ದಿವಸ: ಈ ಕಾರ್ಯಕ್ರಮದಲ್ಲಿ ಗರ್ಭಿಣಿಯರ ಗಂಡಂದಿರು ಹಾಗೂ ಸಮುದಾಯದ ಪುರುಷರಿಗೆ ಪೌಷ್ಠಿಕ ಹಾಗೂ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿ ಮಕ್ಕಳ ಆರೈಕೆ ಬಗ್ಗೆ ಅರಿವು ಮೂಡಿಸುವುದು. • ಜನಾಂದೋಲನಾ ಮತ್ತು ಐಇಸಿ ಕಾರ್ಯಕ್ರಮಗಳಡಿ ಮುದ್ರಣ ಸಾಮಗ್ರಿಗಳು, ಬೀದಿ ನಾಟಕ, ಗೋಡೆ ಬರಹ, ರೇಡಿಯೋ ಹಾಗೂ ದೂರದರ್ಶನ ಕಾರ್ಯಕ್ರಮಗಳನ್ನು ಅಯೋಜಿಸಲಾಗಿದೆ. • ಪೋಷಣ ಟ್ರ್ಯಾಕರ್ ಅಪ್ ಹಾಗೂ ಪೋಷಣ್ ಮಾಸ ಮತ್ತು ಪೋಷಣ್ ಪಕ್ವಾಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. (ಅನುಬಂಧ-1 ಮತ್ತು 2 ಲಗತ್ತಿಸಿದೆ)

	ಎನ್.ಹೆಚ್.ಎಫ್.ಎಸ್-4	ಎನ್.ಹೆಚ್.ಎಫ್.ಎಸ್-5
ಕುಂಠಿತ ಬೆಳವಣಿಗೆ	36.2	35.4
ಸರಾಸರಿ ಕಡಿಮೆ ತೂಕ	26.1	19.5
ತೀವ್ರ ಕಡಿಮೆ ತೂಕ	10.5	8.4
ಕಡಿಮೆ ತೂಕ	35.2	32.9
ರಕ್ತಹೀನತೆ (6 ತಿಂಗಳಿನಿಂದ 59 ತಿಂಗಳಿನ ವರೆಗಿನ ಮಕ್ಕಳು	60.9	65.5

<table>
<tr>
<td>ಇ)</td>
<td>ಕಳೆದ 3 ವರ್ಷಗಳಲ್ಲಿ ರಾಷ್ಟ್ರೀಯ ಪೋಷಣ ಅಭಿಯಾನ ಅಡಿ ಒದಗಿಸಿದ ಅನುದಾನವೆಷ್ಟು: ಈ ಅನುದಾನದಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು: ವಿನಿಯೋಗಿಸಿದ ಅನುದಾನವೆಷ್ಟು:</td>
<td>ರಾಷ್ಟ್ರೀಯ ಪೋಷಣ್ ಅಭಿಯಾನ ಅಡಿ ಒದಗಿಸಿದ ಅನುದಾನ ಹಾಗೂ ವೆಚ್ಚದ ವಿವರ (ಅನುಬಂಧ-3 ಲಗತ್ತಿಸಿದೆ)

<table>
<tr><th>ವರ್ಷ</th><th>ಬಿಡುಗಡೆ</th><th>ವೆಚ್ಚ</th></tr>
<tr><td>2018-19</td><td>8757.58</td><td>-</td></tr>
<tr><td>2019-20</td><td>12972.15</td><td>6575.69</td></tr>
<tr><td>2020-21</td><td>1054.58</td><td>11976.68</td></tr>
</table>

2021-22ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಪೋಷಣ್ ಟ್ರಾಕರ್ ಆಪ್ ನಲ್ಲಿ ಫಲಾನುಭವಿಗಳ ವಿವರಗಳನ್ನು ನಮೂದಿಸುವ ಸಲುವಾಗಿ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಮೇಲ್ವಿಚಾರಕಿಯರಿಗೆ ಮೋಬೈಲ್ ಫೋನ್, ಪವರ್ ಬ್ಯಾಂಕ್ ಮತ್ತು ಸಿಮ್ ಗಳನ್ನು ಪೋಷಣ್ ಅಭಿಯಾನ ಅಡಿಯಲ್ಲಿ ಒದಗಿಸಲಾಗಿದೆ. ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಈ ಕಾರ್ಯಕ್ರಮದಡಿಯಲ್ಲಿ, Growth Monitoring devices (Infantometer, Stadiometer, Mother and child weighing scale, Infant Weighing Scale spring) ಗಳನ್ನು ಒದಗಿಸಲಾಗಿದೆ. ಈ ಕಾರ್ಯಕ್ರಮದಡಿ ರಾಜ್ಯ, ಜಿಲ್ಲಾ ಹಾಗೂ ಯೋಜನಾ ಮಟ್ಟದಲ್ಲಿ ಸಿಬ್ಬಂದಿಗಳನ್ನು ನೇಮಿಸಲಾಗಿದ್ದು, ಸಿಬ್ಬಂದಿಗಳಿಗೆ ಗೌರವಧನವನ್ನು ಪಾವತಿಸಲಾಗುತ್ತಿದೆ. ರಾಜ್ಯಾದ್ಯಂತ, ಸಮುದಾಯ ಆಧಾರಿತ ಚಟುವಟಿಕೆಗಳನ್ನು ಆಯೋಜಿಸಲಾಗಿದ್ದು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಿಬ್ಬಂದಿಗಳಿಗೆ ಐಎಲ್‌ಎ (Incremental Learning Approach) ತರಬೇತಿಗಳನ್ನು ನೀಡಲಾಗಿದೆ. ಜನಾಂದೋಲನಾ ಕಾರ್ಯಕ್ರಮದಡಿ ಪೋಷಣ್ ಮಾಹೆ ಹಾಗೂ ಪೋಷಣ್ ಪಕ್ವಾಡ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಅಯೋಜಿಸಲಾಗಿದೆ. ಐಇಸಿ ಕಾರ್ಯಕ್ರಮದಡಿ ಮುದ್ರಣ ಸಾಮಗ್ರಿಗಳು, ಬೀದಿ ನಾಟಕ, ಗೋಡೆ ಬರಹ, ರೇಡಿಯೋ ಹಾಗೂ ದೂರದರ್ಶನ ಕಾರ್ಯಕ್ರಮಗಳನ್ನು ಅಯೋಜಿಸಲು ವೆಚ್ಚ ಭರಿಸಲಾಗಿದೆ.</td>
</tr>
<tr>
<td>ಈ)</td>
<td>ಕೇಂದ್ರ ಸರ್ಕಾರದ Integrated Child Development Scheme ಅಡಿ ತಾಯಿ-ಮಕ್ಕಳ ಬೆಳವಣಿಗೆಗೆ ಪೌಷ್ಠಿಕ ಆಹಾರ ಲಭ್ಯತೆ ಮತ್ತು ಪೋಷಣೆ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ ಪ್ರಗತಿ ವರದಿ ನೀಡುತ್ತಿದ್ದಾರೆಯೇ: ಇಲ್ಲದಿದ್ದಲ್ಲಿ, ರಾಜ್ಯ ಸರ್ಕಾರ ಈ ಯೋಜನೆ ಅನುಷ್ಠಾನವನ್ನು ಕ್ರಮಬದ್ಧವಾಗಿ ಜಾರಿಗೊಳಿಸಲು ಕೈಗೊಂಡಿರುವ ಕ್ರಮಗಳೇನು: (ಸಂಪೂರ್ಣ ಮಾಹಿತಿ ನೀಡುವುದು)</td>
<td>ಹೌದು, ಕೋವಿಡ್ -19ರ ಹಿನ್ನಲೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ ಪ್ರಗತಿ ವರದಿಯನ್ನು ಸಲ್ಲಿಸುತ್ತಿದ್ದಾರೆ. ತಾಯಿ ಮಕ್ಕಳಿಗೆ ಪೋಷ್ಠಿಕ ಆಹಾರ ವಿತರಿಸಿ ಅವರ ಆರೋಗ್ಯ ಹಾಗೂ ಬೆಳವಣಿಗೆ ಕುರಿತು ಅರಿವು ಮೂಡಿಸುತ್ತಿದ್ದಾರೆ. ಪೋಷಣ್ ಟ್ರ್ಯಾಕರ್ ಅಪ್‌ನಲ್ಲಿ ಮಾಹಿತಿಯನ್ನು ಅಳವಡಿಸುತ್ತಿದ್ದಾರೆ.</td>
</tr>
</table>

ಉ)	ರಾಜ್ಯದಲ್ಲಿ ಪೋಷಣ ಅಭಿಯಾನ ಅನುಷ್ಠಾನಗೊಳಿಸಲು – Poshan Tracker App ನ್ನು ತಮ್ಮ ಮೊಬೈಲ್ ನಲ್ಲಿ ಬಳಸುತ್ತಿದ್ದು, ಅಂಗನವಾಡಿ ಕಾರ್ಯಕರ್ತರಿಗೆ ಅತಿ ಕಡಿಮೆ ವೇತನ ನೀಡಿರುವುದರಿಂದ ಮತ್ತು ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲದೆ ಇರುವುದರಿಂದ ಅಂಗನವಾಡಿ ಕಾರ್ಯಕರ್ತರು ಬಳಸುವ ಮೊಬೈಲ್ ಫೋನ್ ವೆಚ್ಚ ಮತ್ತು ರೀಚಾರ್ಜ್ ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರ ಮುಂದಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು)	ಪೋಷಣ್ ಟ್ರ್ಯಾಕರ್ ಅಪ್‌ನ್ನು ಬಳಸಲು ರಾಜ್ಯ ಸರ್ಕಾರವು ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಮೇಲ್ವಿಚಾರಕಿಯರಿಗೆ ಸೆಪ್ಟಂಬರ್/ಅಕ್ಟೋಬರ್-2020ರಲ್ಲಿ ಮೊಬೈಲ್ ಫೋನ್‌ಗಳನ್ನು GeM Portal ಮೂಲಕ ಖರೀದಿಸಿ ವಿತರಿಸಲಾಗಿದೆ. ಈ ಫೋನ್‌ಗಳಿಗೆ ಇಲಾಖೆಯೇ ಸಿಮ್‌ಗಳನ್ನು ಖರೀದಿಸಿ ನೀಡಿದ್ದು, ಪ್ರತಿ ಸಿಮ್‌ಗೆ ಪ್ರತಿ ದಿನದಂತೆ 1ಜಿಬಿ ಡೇಟಾ, ಅನ್‌ಲಿಮಿಟೆಡ್ ಕಾಲ್ಸ್ ಒಳಗೊಂಡಂತೆ ಪ್ರತಿ ತಿಂಗಳಿಗೆ ಮಾಸಿಕ ವೆಚ್ಚ ರೂ.200/-ಗಳನ್ನು ಇಲಾಖೆಯಿಂದ ಭರಿಸಲಾಗುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಇದರಿಂದ ಯಾವುದೇ ಆರ್ಥಿಕ ಹೊರೆಯಾಗಿರುವುದಿಲ್ಲ.

ಸಂಖ್ಯೆ: ಮಮಇ 213 ಐಸಿಡಿ 2021

Halappa

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

Annexure - 1

POSHAN Abhiyaan IEC ,POSHAN Maah and POSHAN Pakwada Reports
Mid-Media, Mass Media Activites, POSHAN Abhiyaan 2020-21
District Wise Consolidated Report

Sl.No	District Name	Priniting Materials (Posters,CBE, take aways,Pomplets, Standies, Poshanrtha,etc)	Mass Media (Street plays,Wall Paintings etc)	POSHAN Maah	POSHAN Pakwada
1	Bagalkote	Yes	Yes	Yes	Yes
2	Bangalore Urban	Yes	Yes	Yes	Yes
3	Bangalore Rural	Yes	Yes	Yes	Yes
4	Belagavi	Yes	Yes	Yes	Yes
5	Bellary	Yes	Yes	Yes	Yes
6	Bidar	Yes	Yes	Yes	Yes
7	Chamarajnagar	Yes	Yes	Yes	Yes
8	Chitradurga	Yes	Yes	Yes	Yes
9	Chikkaballapur	Yes	Yes	Yes	Yes
10	Chikamagaluru	Yes	Yes	Yes	Yes
11	Dharwad	Yes	Yes	Yes	Yes
12	Davengere	Yes	Yes	Yes	Yes
13	Gadag	Yes	Yes	Yes	Yes
14	Hassan	Yes	Yes	Yes	Yes
15	Haveri	Yes	Yes	Yes	Yes
16	Kalburagi	Yes	Yes	Yes	Yes
17	Kodagu	Yes	Yes	Yes	Yes
18	Kolar	Yes	Yes	Yes	Yes
19	Koppal	Yes	Yes	Yes	Yes
20	Mysore	Yes	Yes	Yes	Yes
21	Mandya	Yes	Yes	Yes	Yes
22	Ramanagar	Yes	Yes	Yes	Yes
23	Raichur	Yes	Yes	Yes	Yes
24	Shivamogga	Yes	Yes	Yes	Yes
25	Tumkur	Yes	Yes	Yes	Yes
26	Udupi	Yes	Yes	Yes	Yes
27	Uttar Kannada	Yes	Yes	Yes	Yes
28	Vijayapura	Yes	Yes	Yes	Yes
29	Yadgir	Yes	Yes	Yes	Yes
30	Dakshina Kannada	Yes	Yes	Yes	Yes

Annexure - 2

CBE Report District wise Consolidated Report 2020-21

Sl.No	District Name	No of AWCs in Districts	Jan	Feb	March	April
1	BagalKote	2221	4442	4442	4442	2221
2	Bangalore Urban	1229	2458	2458	2458	1229
3	Bangalore Rural	1543	3086	3086	3086	1543
4	Bidar	1893	3786	3786	3786	1893
5	Bellary	2784	5568	5568	5568	2784
6	Belagavi	5294	10588	10588	10588	5294
7	Chamarajanagar	1421	2842	2842	2842	1421
8	Chitradurga	2324	4648	4648	4648	2324
9	Chikkaballapur	1961	3922	3922	3922	1961
10	Chikkamagaluru	1825	3650	3650	3650	1825
11	Dakshina Kannada	2104	4208	4208	4208	2104
12	Dharwad	1505	3010	3010	3010	1505
13	Davengere	1721	3442	3442	3442	1721
14	Gadag	1166	2332	2332	2332	1166
15	Hassan	2523	5046	5046	5046	2523
16	Haveri	1918	3836	3836	3836	1918
17	Kalaburagi	3148	6296	6296	6296	3148
18	Kodagu	871	1742	1742	1742	871
19	Kolar	2061	4122	4122	4122	2061
20	Mysore	2860	5720	5720	5720	2860
21	Mandya	2546	5092	5092	5092	2546
22	Ramanagar	1543	3086	3086	3086	1543
23	Raichur	2662	5324	5324	5324	2662
24	Shimoga	2439	4878	4878	4878	2439
25	Tumkur	4095	8190	8190	8190	4095
26	Uttar Kannada	2687	5374	5374	5374	2687
27	Udupi	1191	2382	2382	2382	1191
28	Vijayapura	2313	4626	4626	4626	2313
29	Yadgir	1386	2772	2772	2772	1386
30	Koppal	1850	3700	3700	3700	1850

Note: Due to COVID-19 Activites has been suspended .

Annexure -3

Expenditure Under POSHAN Abhiyaan Scheme

Components	2018-19	2019-20	2020-21
IEC & Advocacy	0.00	428.23	504.13
Innovation	0.00	0.00	98.92
Flexi Fund	0.00	117.62	24.34
Management Cost- Staffing, hiring, salary, setup of SPMU, etc	0.00	57.6	993.83
Procurement of Mobile phone	0.00	0.00	7315.99
Growth Monitoring devices	0.00	2291.18	1487.56
Recharge AWW & LS mobile phone @ 200/AWC	0.00	0.00	340.53
CBE @ Rs.250/- per AWC	0.00	3371.2	981.05
ILA-State Level	0.00	8.72	2.78
ILA-District Level	0.00	14.44	13.33
ILA-Block Level	0.00	48.59	39.27
ILA-Sector Level	0.00	238.11	**174.94**
Total	**0.00**	**6575.69**	**11976.68**